ಅ) ಗುಲ್ಬರ್ಗಾದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ನವೀಕರಣ ಯೋಜನೆಗೆ ನಿಗಧಿಪಡಿಸಿರುವ ಹಣ ಎಷ್ಟು;

ಆ) ನಗರಕ್ಕೆ ಯಾವ ಯಾವ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ;

ಇ) ಪೈಪ್ ಲೈನ್ ನವೀಕರಣ ಕಾಮಗಾರಿ ಯಾವ ಹಂತದಲ್ಲಿದೆ. ಹಾಗೂ ಆ ಕಾರ್ಯ ನಿರ್ವಹಣೆಯಲ್ಲಿ ವಿಳಂಬವಾಗಲು ಕಾರಣಗಳೇನು;

ಈ) ಯೋಜನಾ ವೆಚ್ಚದ ವಿವರಗಳನ್ನು ಹಾಗೂ ಯೋಜನಾ ಗಾತ್ರವನ್ನು ತಿಳಿಸುವುದು;

ಉ) ಇದಕ್ಕಾಗಿ ಮುಖ್ಯಮಂತ್ರಿಗಳ ಪ್ಯಾಕೇಜ್‌ನ್ನು ಘೋಷಿಸಲಾಗಿದೆಯೇ; ಮತ್ತು ಪ್ಯಾಕೇಜ್ ಮೊತ್ತ ಎಷ್ಟು; ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ರೂ. 5797.86 ಲಕ್ಷಗಳು

ಆ) ಸದ್ಯ ನಗರಕ್ಕೆ ಬೆಣ್ಣೆತೋರಾ ಮತ್ತು ಭೀಮಾ ನದಿ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಯೋಜನೆಯ ಶೇ. 60 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಗುಲ್ಬರ್ಗಾ ಮಹಾನಗರ ಪಾಲಿಕೆಯಿಂದ ಹಸ್ತಾಂತರಗೊಂಡ ಕೆಲವು ಸ್ಥಳಗಳಲ್ಲಿ ವಿವಾದದಿಂದ ಹಾಗೂ ಹಣ ಸಕಾಲಕ್ಕೆ ಬಿಡುಗಡೆಯಾಗದ ಕಾರಣ ವಿಳಂಬವಾಗಿರುತ್ತದೆ.

ಈ) ಈ ಯೋಜನೆಗೆ ಜೂನ್ 2004 ರವರೆಗೆ ರೂ. 2001.33 ಲಕ್ಷ ವೆಚ್ಚವಾಗಿರುತ್ತದೆ. ಈ ಯೋಜನೆಯ ಒಟ್ಟು ಗಾತ್ರವು ರೂ. 5797.86 ಲಕ್ಷಗಳಾಗಿರುತ್ತದೆ.

ಉ) ಹೌದು.

ಗುಲ್ಬರ್ಗಾ ನಗರದ ಸಮಗ್ರ ಅಭಿವೃದ್ಧಿಗಾಗಿ ರೂ. 130.00 ಕೋಟಿಗಳ ವಿಶೇಷ ಪ್ಯಾಕೇಜ್ ಘೋಷಿಸಲಾಗಿದ್ದು, ಅದರಲ್ಲಿ ರೂ. 74.60 ಕೋಟಿಗಳನ್ನು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗೆ ನಿಗಧಿಪಡಿಸಲಾಗಿದೆ.

ಶೃಂಗೇರಿ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವ ನಕ್ಸಲ್ ಚಟುವಟಿಕೆ

15 (23) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡಿನಲ್ಲಿ ಕಾಣಿಸಿಕೊಂಡಿರುವ ನಕ್ಸಲ್ ಚಟುವಟಿಕೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಶೃಂಗೇರಿ ಕ್ಷೇತ್ರದ ಯಾವ ಯಾವ ಭಾಗಗಳು ನಕ್ಸಲ್ ಪೀಡಿತ ಎಂದು ಗುರುತಿಸಲಾಗಿದೆ;

ಇ) ದೇಶದ ಪ್ರಸಿದ್ಧ ಯಾತ್ರಾ ಹಾಗೂ ಭಕ್ತಿ ಕೇಂದ್ರವಾದ ಶೃಂಗೇರಿಯ ಸುತ್ತಮುತ್ತ ಹೆಚ್ಚಿನ ಭದ್ರತೆ ಒದಗಿಸಲಾಗಿದೆಯೇ;

ಈ) ಒದಗಿಸಲಾಗದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಒಂದು ನಕ್ಸಲ್ ನಿಗ್ರಹ ದಳವನ್ನು ರಚಿಸಿ ಇದರಲ್ಲಿ ಒಂದು ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ 10 ಜನ ಡಿ.ಎ.ಆರ್. ಸಿಬ್ಬಂದಿಗಳನ್ನು ನೇಮಿಸಿ ಸದರಿ ದಳವನ್ನು ಕುದುರೆಮುಖ ರಾಷ್ಟ್ರೀಯ

ಉದ್ಯಾನವನದ ಸುತ್ತಮುತ್ತಲಿನ ಪ್ರದೇಶದ ಗ್ರಾಮಗಳಲ್ಲಿ ನಕ್ಸಲೀಯರ ಚಟುವಟುಕೆಗಳನ್ನು ಹತ್ತಿಕ್ಕಲು ಕಾರ್ಯಾಚರಣೆ ನಡೆಸಲು ಚಿಕ್ಕಮಗಳೂರು ಜಿಲ್ಲೆಯ ಕೆರೆ ಕಟ್ಟೆ ಅರಣ್ಯ ಅತಿಥಿ ಗೃಹದಲ್ಲಿ ಇಡಲಾಗಿದೆ. ಸಾರ್ವಜನಿಕ ಸಂಪರ್ಕ ಸಭೆಗಳನ್ನು ನಕ್ಸಲ್ ಹಾವಳಿಯಿಂದ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಅರಣ್ಯ ಪ್ರದೇಶಗಳಲ್ಲಿನ ವಾಸಿಸುವ ಗ್ರಾಮಸ್ಥರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಆ) ಶೃಂಗೇರಿ ಕ್ಷೇತ್ರದ ಕಿಗ್ಗ, ಸಿಂದೋಡಿ, ಮೀಗ, ಸಿರಿಮನೆ, ನೆಮ್ಮಾರ್, ಕೆರೆಕಟ್ಟೆ, ಚಟ್ಟಿಮನೆ, ಮಗೆಬೈಲೂ, ಕಿತ್ಲೆಮನೆಕೊಡಿಗೆ, ಗುರ್ಗಿ ಶಿರ್ಲೂ, ಹಂದಿಗುಡಿ, ಗುಲಗಾರಬೈಲೂ, ಅವುಂಟು, ದೇವುಂಟು, ಮುಂಡಸಾರು, ಕಾಲುವಂತಿ ಕೊಡಿಗೆ, ಕಡೆಗುಂಡೆ, ಹೊಲಲಿಮನಿವಕಾಡು, ಹೆಮ್ಮೆಗುಂಡಿ, ಉಡುದಾಲ್, ಕರ್ಕಿ, ತಲಗಾರ್, ಗುಕುದಿಬೈಲೂ, ಕೆಡದಹಳ್ಳಿ, ಮಾಗೋಡು, ಕೊಚ್ಚಾರ್, ಕೆರೂರು, ಎಲ್ಸಾರ್, ಸೊಪನ ಕೊಡಿಗೆ, ಹರೆಬೈಲೂ ಪ್ರದೇಶಗಳನ್ನು ನಕ್ಸಲ್ ಪೀಡಿತ ಪ್ರದೇಶವೆಂದು ಗುರುತಿಸಲಾಗಿದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ದಕ್ಷಿಣ ಕನ್ನಡ ಗಿರಿಜನ ಅಭಿವೃದ್ಧಿ ಯೋಜನೆಯ ಬಗ್ಗೆ

1 (115) : ಶ್ರೀ ಅಂಗಾರ .ಎಸ್ (ಸೂಳ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ: ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿ ಕೊರಗ ಜನಾಂಗದ ಎಷ್ಟು ಕುಟುಂಬಗಳ ಮನೆ ದುರಸ್ಥಿ ಮಾಡಲಾಗಿದೆ;

ಆ) ಇದಕ್ಕಾಗಿ ನೀಡಲಾದ ಹಣ ಎಷ್ಟು; (ತಾಲ್ಲೂಕುವಾರು–ಫಲಾನುಭವಿಗಳ ವಿವರ ನೀಡುವುದು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಮತ್ತು (ಆ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗ ಜನಾಂಗದವರ ಹಳೆಯ ಮನೆಗಳ ದುರಸ್ತಿಗಾಗಿ ಆದಿವಾಸಿ ಪಂಗಡದ ಅಭಿವೃದ್ಧಿ ಯೋಜನೆಯಡಿ 2001–02, 2002–03ನೇ ಸಾಲಿಗಳಿಗೆ ಸಂಬಂದಿಸಿದ ಹಣವನ್ನು ಕ್ರಮವಾಗಿ 2002–03, ಮತ್ತು 2003–04ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. 2003–04ನೇ ಸಾಲಿನ ಹಣ ಈವರೆಗೂ ಬಿಡುಗಡೆಯಾಗಿರುವುದಿಲ್ಲ.

2002–03ನೇ ಸಾಲಿನಲ್ಲಿ 75 ಮನೆಗಳ ದುರಸ್ತಿಗೆ ರೂ. 7.50 ಲಕ್ಷ ಹಣ ನಿಗದಿಯಾಗಿದ್ದು ಇದರಲ್ಲಿ 65 ಮನೆಗಳ ದುರಸ್ತಿ ಪೂರ್ಣವಾಗಿದೆ ಹಾಗೂ ರೂ. 6.50 ಲಕ್ಷ ಹಣ ಖರ್ಚಾಗಿದೆ. 10 ಮನೆಗಳ ದುರಸ್ತಿ ಬಾಕಿ ಇದೆ. 2003–04ನೇ ಸಾಲಿನಲ್ಲಿ 145 ಮನೆಗಳ ದುರಸ್ತಿಗೆ ರೂ. 14.50 ಲಕ್ಷ ಹಣ ನಿಗದಿಯಾಗಿದ್ದು, 30 ಮನೆಗಳ ದುರಸ್ತಿಗೆ ರೂ. 3.00 ಲಕ್ಷ ವೆಚ್ಚವಾಗಿದೆ. ಇನ್ನುಳಿದ 115 ಮನೆಗಳ ದುರಸ್ತಿ ಬಾಕಿ ಇದೆ. ಮನೆ ದುರಸ್ತಿ ಪೂರ್ಣಗೊಂಡ ಫಲಾನುಭವಿಗಳ ಪಟ್ಟಿಯನ್ನು ಅನುಬಂಧ–1 ಮತ್ತು 2 ರಲ್ಲಿ ಒದಗಿಸಲಾಗಿದೆ.